**ಸಾಕ್ಷಿಯನ್ನು ದಿನಾಂಕಃ 08.01.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ 1 ರಿಂದ 4 ನೇ ಪ್ರತಿವಾದಿಗಳ ಪರ ಶ್ರೀ ಆರ್.ಎನ್.ಎನ್, ವಕೀಲರಿಂದಃ**

ನಾನು ಸರ್ವೆ ನಂ. 8/1 ಮತ್ತು 8/2 ಕ್ಕೆ ಸಂಬಂಧಿಸಿದಂತೆ ದಾವೆ ಸಲ್ಲಿಸಿರುತ್ತೇನೆ. ದಾವಾ ಸ್ವತ್ತುಗಳಲ್ಲಿ 5 ಮತ್ತು 6 ನೇ ಪ್ರತಿವಾದಿಗಳು ಸ್ವಾಧೀನದಲ್ಲಿರುವುದರಿಂದ ಸದರಿ ಆಸ್ತಿಗಳನ್ನು ನನಗೆ ಬಿಡಿಸಿಕೊಡುವಂತೆ ಈ ದಾವೆ ಸಲ್ಲಿಸಿರುತ್ತೇನೆ. ಸರ್ವೆ ನಂ.8/1 ರಲ್ಲಿರುವ ಆಸ್ತಿ ಇಲ್ಲಿಯವರೆಗೂ ಅಳತೆಯಾಗಿರುವುದಿಲ್ಲ. 1 ನೇ ಐಟಂ ದಾವಾ ಸ್ವತ್ತಿನಲ್ಲಿ ಕೊಟ್ಟಿಗೆ ಮತ್ತು ಕೊಠಾರ ಮಾಡಿಕೊಂಡು ಸುಮಾರು 30-40 ವರ್ಷಗಳಿಂದಲೂ 5 ಮತ್ತು 6 ನೇ ಪ್ರತಿವಾದಿಗಳೇ ಸ್ವಾಧೀನದಲ್ಲಿರುತ್ತಾರೆ. ಸರ್ವೆ ನಂ. 8/1 ರಲ್ಲಿರುವ 3 ಎಕರೆ 12 ಗುಂಟೆಯ ದಕ್ಷಿಣ ದಿಕ್ಕಿಗೆ ಪ್ರತಿವಾದಿಗಳು 8 ಗುಂಟೆಯನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ. ಸದರಿ ಈ ದಾವೆ ಸಲ್ಲಿಸುವ ಪೂರ್ವದಲ್ಲಿ ದಾವಾ ಸ್ವತ್ತುಗಳನ್ನು ಅಳತೆ ಮಾಡಿಸಿರುವುದಿಲ್ಲ. ಸರ್ವೆ ನಂ. 8/1 ರಲ್ಲಿ ನಾನು 3 ಎಕರೆ ವಿಸ್ತೀರ್ಣದ ಆಸ್ತಿಯಲ್ಲಿ ಸ್ವಾಧೀನದಲ್ಲಿರುತ್ತೇನೆ. ಒತ್ತುವರಿ ಮಾಡಿಕೊಂಡಿರುತ್ತಾರೆಂದು ಹೇಳಿರುವ 8 ಗುಂಟೆ ಜಮೀನನ್ನು ಪೂರ್ವಕ್ಕೆ - ಶಿವಾನಂದರವರ ಜಮೀನು, ಪಶ್ಚಿಮಕ್ಕೆ - ವಟೆರಪ್ಪರವರ ಜಮೀನು, ಉತ್ತರಕ್ಕೆ - ರಸ್ತೆ ಮತ್ತು ದಕ್ಷಿಣಕ್ಕೆ - ಶಿವಾನಂದರವರು ಜಮೀನು ಇರುತ್ತದೆ. ಪ್ರತಿವಾದಿಗಳು ಯಾವುದೇ ಜಮೀನನ್ನು ಒತ್ತುವರಿ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಅಂಶಗಳನ್ನು ಸೇರಿಸಿ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಕೇಳಿರುವ ಪರಿಹಾರ ಪಡೆಯಲು ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,**

**ನಂಜನಗೂಡು.**